

ಊರಿಗೆ ಹೋಗಲು ಬಸ್ ಸ್ಟ್ಯಾಂಡ್‌ಗೆ ಬಂದಿದ್ದೆ. ಬಸ್ ಸ್ಟ್ಯಾಂಡ್‌ನಲ್ಲಿ ತಿರುಬೋಕಿಯೂ ಇದ್ದ. ಕೈಯ್ಯಲ್ಲಿ ಏರ್ ಬ್ಯಾಗ್ ಒಂದನ್ನು ಜೋಲಿಸಿಕೊಂಡಿದ್ದ. ಈತನೂ ಎತ್ತಲೋ ಹೊರಟಿರಬೇಕು ಎಂದುಕೊಂಡೆ ನಾನು. ಅವನ ತಿರುಗಾಟವೇನೂ ವಿಶೇಷ ಎನ್ನಿಸಲಿಲ್ಲ. ಹೆಸರಿಗನ್ವಯವಾಗಿ ಆತ ತಿರುಬೋಕಿಯೇ. ಅವನ ಮೂಲ ಹೆಸರು ಏನೋ.. ಯಾರಿಗೂ ತಿಳಿಯದು. ತನ್ನ ಮೂಲ ಹೆಸರೇನು ಎಂಬುದು ಸ್ವತಃ ಅವನಿಗೇ ತಿಳಿಯದೇನೋ. ಎಲ್ಲರೂ ಆತನನ್ನು ಕರೆಯುತ್ತಿದ್ದುದು ತಿರುಬೋಕಿ ಎಂಬುದಾಗಿಯೇ.

ತಿರುಬೋಕಿ ಸದಾ ಸಂಚಾರಿ. ಸಂಚಾರದಲ್ಲಿ ದೇವರ್ಷಿ ನಾರದನನ್ನು ಮೀರಿಸುವವ. ಒಂದು ದಿನ ಮನೆಯಲ್ಲಿ ಇದ್ದರೆ ಮತ್ತೆ ನಾಲ್ಕು ದಿನ ಇರುವುದಿಲ್ಲ. ಆತ ತಿರುಗದ ಊರಿಲ್ಲ; ನೋಡದ ನಗರ ಪಟ್ಟಣಗಳಿಲ್ಲ. ಅದು ಹೇಗೆ ಪ್ರಯಾಣಕ್ಕೆ ಹಣ ಹೊಂದಿಸಿಕೊಳ್ಳುತ್ತಾನೆಯೋ ಈ ತಿರುಬೋಕಿ. ನನಗೆ ಅಕಲು ಹತ್ತುವುದಿಲ್ಲ. ಹಾಗೆಂದು ತಾನು ಇಂಥಲ್ಲಿಗೆ ಹೋಗಬೇಕೆಂದುಕೊಂಡಿದ್ದೇನೆ. ತುಸು ಹಣ ಸಹಾಯ ಮಾಡಿ ಎಂದು ಯಾರನ್ನೂ ಕೇಳಿದವನೂ ಅಲ್ಲ. ಅಷ್ಟೇಕೆ.. 'ಹಣ ಕೊಡು' ಎಂದು ತನ್ನ ತಾಯಿಯನ್ನು ಪೀಡಿಸಿದವನೂ ಅಲ್ಲ. ತಾಯಿಯೇ ಮಗ ಎಲ್ಲಿಗೋ ಹೊರಟಿದ್ದಾನೆ. ಬಸ್ ಚಾರ್ಜಿಗಾದರೂ ರೊಕ್ಕ ಬೇಡವೇ? ಎಂದುಕೊಂಡು ನೂರೋ ಇನ್ನೂರೋ ಕೊಡುತ್ತಾಳೆ.

ತಿರುಬೋಕಿ ಆರು ವರ್ಷದವನಿದ್ದಾಗಲೇ ಅವನ ಅಪ್ಪ ತೀರಿಕೊಂಡಿದ್ದ. ತಿರುಬೋಕಿಯ ಅಮ್ಮ ಪ್ರೈಮರಿ ಶಾಲಾ ಶಿಕ್ಷಕಿ. ತೀರಾ ಪಾಪದ ಹೆಂಗಸು. ಗಟ್ಟಿಯಾಗಿ ಮಾತನ್ನಾಡಿದ್ದೇ ಇಲ್ಲ. ಶಾಲೆಯಲ್ಲಿಯೂ ಎಲ್ಲರಿಗೂ ಮೆಚ್ಚಿನವಳು. ಮಕ್ಕಳಿಗೂ ಈ ಟೀಚರ್ ಅಂದರೆ ತುಂಬಾ ತುಂಬಾನೇ ಇಷ್ಟ.

ತಿರುಬೋಕಿಯ ಮನೆ ನಮ್ಮ ಮನೆಯ ಸಮೀಪವೇ. ನಮ್ಮ ಮನೆಯಿಂದ ಸುಮಾರು ಆರು ಮನೆಗಳ ಆಚೆ. ತಿರುಬೋಕಿಯ ಅಪ್ಪ ತಾಲೂಕು ಆಫೀಸ್‌ನಲ್ಲಿ ಗುಮಾಸ್ತನಾಗಿದ್ದವ. ಆ ಕೆಲಸದಲ್ಲಿದ್ದಾಗಲೇ ಸ್ವಂತ ಮನೆಯೊಂದನ್ನು ಮಾಡಿಕೊಂಡ. ಅವನು ಸಾಯುವಾಗ ಮಗಳು ಏಳನೆಯ ತರಗತಿ ಮುಗಿಸಿ ಹೈಸ್ಕೂಲ್‌ಗೆ ಕಾಲಿಟ್ಟಿದ್ದಳು. ಮಗ ಈ ತಿರುಬೋಕಿ ಇನ್ನೂ ಸಣ್ಣವನು.

ತಿರುಬೋಕಿಯ ಅಕ್ಕ ಹೈಸ್ಕೂಲ್ ಮುಗಿಸಿದಳು. ಕಾಲೇಜಿಗೆ ಸೇರಬೇಕೆಂಬ ಆಸೆ ಅವಳದು. ಆದರೆ ಅವಳ ಅಮ್ಮ ಮಗಳನ್ನು ಕಾಲೇಜಿಗೆ ಕಳುಹಿಸಲು ಒಪ್ಪಲಿಲ್ಲ. ಗಂಡು ಹುಡುಕಿ ಮಗಳಿಗೆ ಮದುವೆ ಮಾಡಲು ಮುಂದಾದಳು. ಗಂಡೂ ಸಿಕ್ಕಿತು. ಅಳಿಯನೂ ಮೇಷ್ಟ್ರೇ. ಸಿದ್ಧಾಪುರ ಸಮೀಪದ ಬಿಳಗಿಯಲ್ಲಿ ಹೈಸ್ಕೂಲ್ ಮೇಷ್ಟ್ರು ಆತ.

ತಿರುಬೋಕಿಯ ಅಮ್ಮನಿಗೂ ನನ್ನ ಹೆಂಡತಿಗೂ ಗಳಸ್ಯ ಕಂಠಸ್ಯ. ಶಾಲೆ ಮುಗಿಸಿ ಮನೆಗೆ ಬಂದವಳೇ ತಿರುಬೋಕಿಯ ಅಮ್ಮ ಅನುಸೂಯಾ ಅಂತ ಅವಳ ಹೆಸರು ಸೀದಾ ನಮ್ಮ ಮನೆಗೆ ಬರುತ್ತಾಳೆ. ಇಲ್ಲವೇ ನನ್ನಾಕೆ ಅವಳ ಮನೆಗೆ ಹೋಗುತ್ತಾಳೆ. ಅಂತೂ ದಿನವೂ ಇಬ್ಬರ ಭೇಟಿ ಇದ್ದದ್ದೇ; ಗಂಟೆಗಟ್ಟಲೆ ಅದೂ ಇದೂ ಸುದ್ದಿ ಬಿಚ್ಚಿದ್ದೇ. ಇನ್ನು ಹಬ್ಬ ಹರಿದಿನಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ, ನಮ್ಮ ಮನೆಗೆ ಯಾರಾದರೂ ಅತಿಥಿಗಳು ಬರುವ ದಿನಗಳಲ್ಲಿ ಅನುಸೂಯಾ ಅಡುಗೆ ಪಡುಗೆ ಸಹಾಯಕ್ಕೆ ನಮ್ಮ ಮನೆಯಲ್ಲಿ ಹಾಜರ್. ತನ್ನ ಮನೆಯಲ್ಲಿ ಏನೇ ವಿಶೇಷ ತಿಂಡಿ ತಿನಿಸು ಮಾಡಿರಲಿ ಅದನ್ನು ನಮ್ಮ ಮನೆಗೆ ತಂದುಕೊಡುತ್ತಾಳೆ ಅನುಸೂಯಾ. ಇಲ್ಲವೇ ನನ್ನನ್ನೂ ನನ್ನಾಕೆಯನ್ನೂ ಒತ್ತಾಯದಿಂದ ತನ್ನ ಮನೆಗೆ ಕರೆದುಕೊಂಡು ಹೋಗಿ ಆ ವಿಶೇಷ ತಿಂಡಿ ತಿನಿಸು ನೀಡುತ್ತಾಳೆ.

ಮಗ ತಿರುಬೋಕಿ ಎಂಬುದು ಆ ಅನುಸೂಯಾಳಿಗೆ ತಿಳಿಯದ ವಿಷಯವೇನಲ್ಲ. ಈ ಬಗ್ಗೆ ಕೊರಗೂ ಇದೆ. ನಮ್ಮ ಬಳಿ ಅದನ್ನು ಹತ್ತು ಹಲವು ಬಾರಿ ಹೇಳಿಕೊಂಡಿದ್ದಾಳೆ. ಪಿಸುಗಣ್ಣೀರು ಹರಿಸಿದ್ದಾಳೆ. ಇವನ ಅಪ್ಪ ಊರು ಬಿಟ್ಟು ಹೋದದ್ದೇ ಅಪರೂಪ. ಹೆಣ್ಣು ಕೊಟ್ಟ ತಮ್ಮ ಮಾವನ ಮನೆಗೆ ಅಂದರೆ ತನ್ನ ತವರು ಮನೆಗೆ ಮದುವೆಯ ಮೊದಲ ವರ್ಷ ದೀಪಾವಳಿ ಹಬ್ಬಕ್ಕೆ ಹೋಗಿ ಬಂದವರು ಮತ್ತೆ ಅಲ್ಲಿಗೆ ಹೋಗಿ ಬಂದದ್ದು ಸಾಯುವ ಮುಂಚಿನ ವರ್ಷ. ಈ ಮಗ ನೋಡಿದರೆ ಒಂದೇ ಒಂದು ದಿನ ಸಮನಾಗಿ ಮನೆಯಲ್ಲಿ ಇರುವವನಲ್ಲ. ಅದೇನು... ಕಾಲಿನಲ್ಲಿ ಚಕ್ರ ಕಟ್ಟಿಕೊಂಡಿದ್ದಾನೆಯೋ ಏನೋ.. ಎಂದು ಅಲವತ್ತುಕೊಳ್ಳುತ್ತಾಳೆ. ತಾನು ಊರೂರು ತಿರುಗುವುದು ತನ್ನ ತಾಯಿಗೆ ಇಷ್ಟವಲ್ಲದ ವಿಚಾರ ಎಂಬುದು ತಿರುಬೋಕಿಗೆ ಗೊತ್ತು. ಹಾಗಂತ ತಿರುಗಾಟವನ್ನೇನೂ ಅವನು ಕಡಿಮೆ ಮಾಡಿದವನಲ್ಲ; ಬಿಟ್ಟವನೂ ಅಲ್ಲ.

ನಾನೇ ಒಂದೆರಡು ಬಾರಿ `ಇದೇನಯ್ಯಾ.. ಹೀಗೆ ದಿನಾಲೂ ಅಲ್ಲಿ ಇಲ್ಲಿ, ಆ ಊರು ಈ ಊರು ಅಂತ ತಿರುಗುತ್ತಲೇ ಇರುತ್ತೀಯೆ. ಒಂದು ಕೆಲಸ ಅಂತ ಹಿಡಿಯಬಾರದೇ? ತಾಯಿಯನ್ನು ನೋಡಿಕೊಂಡು ಮನೆಯಲ್ಲಿ ಇರಬಾರದೇ? ಅಂತ ಕೇಳಿದ್ದೆ; ಹೇಳಿದ್ದೆ.

'ನೋಡಿ ಸರ್..ಹೇಳುತ್ತಾರಲ್ಲಾ 'ಕೋಶ ಓದು; ದೇಶ ತಿರುಗು' ಅಂತ. ಪಟ್ಟು ಹಿಡಿದು ಕುಳಿತು ಪುಸ್ತಕ ಅಂದರೆ ಕೋಶ ಓದುವುದಕ್ಕಂತೂ ನನ್ನಿಂದ ಸಾಧ್ಯ ಇಲ್ಲ. ಇನ್ನು ದೇಶ ತಿರುಗೋದು.. ನನಗೆ ಖುಷಿ ಕೊಡುತ್ತದೆ' ಎನ್ನುತ್ತಿದ್ದ.

'ಹೌದೂ..ದೇಶಾ ತಿರುಗೋಕೆ ರೊಕ್ಕ ಬೇಕಲ್ಲಾ.. ಅದಕ್ಕೇನು ಮಾಡುತ್ತೀಯೆ?' ಕೇಳಿದ್ದೆ ನಾನು.

'ರೊಕ್ಕ ಇದ್ದರೆ ಬಸ್ಸು, ರೈಲು. ಇಲ್ಲಾಂತ ಆದರೆ ಲಾರಿ ಡ್ರೈವರ್‌ನನ್ನು ಕಾಡಿ ಬೇಡಿ ಲಾರಿ ಹತ್ತೋದು. ತನ್ನ ಸೀಟಿನ ಪಕ್ಕದಲ್ಲಿ ಕುಳಿತುಕೊಳ್ಳಲು ನನಗೆ ಜಾಗ ಕೊಟ್ಟರೆ ಅಲ್ಲಿ ಕುಳಿತು ಪ್ರಯಾಣ. ಅಲ್ಲಿ ಜಾಗ ಕೊಡಲಿಲ್ಲ ಅಂತಾದರೆ ಲಾರಿಯ ಹಿಂಬದಿ ಹೇರಿದ್ದ ಮೂಟೆ, ಸಾಮಾನು, ಸರಂಜಾಮುಗಳ ಜೊತೆ ನಾನೂ ಒಂದು ಮೂಟೆಯಾಗಿ ಕುಳಿತು ಪ್ರಯಾಣ. ಅದೂ ಸಿಗಲಿಲ್ಲ ಅಂತಾದರೆ..ಇದ್ದದ್ದೇ..ವಿನೋಬಾ ಸರ್ವೀಸ್..ಅಂದರೆ ಕಾಲ್ನಡಿಗೆ.. ಎನ್ನುತ್ತಿದ್ದ ತಿರುಬೋಕಿ.

ತಿರುಬೋಕಿ ಸೌಮ್ಯ ಮುಖದ ತರುಣ. ಅವನ ಸ್ವಭಾವವೂ ಸೌಮ್ಯವೇ. ನಾನು ಹೇಳುವ ಯಾವ ಕೆಲಸವನ್ನೂ `ಒಲ್ಲೆ.. ಮಾಡಲಾರೆ ಎಂದವನಲ್ಲ. ನಾನೂ ಹೇಳದೆಯೂ ನನ್ನ ಕೆಲವು ಕೆಲಸಗಳನ್ನು ತಾನಾಗಿಯೇ ಮಾಡಲು ಮುಂದಾಗುವವ. ಊರಿನಲ್ಲಿ ಇರುವ ದಿನಗಳಲ್ಲಿಆ ದಿನಗಳು ಅಪರೂಪ ಅನ್ನಿ ಅವನು ತನ್ನ ಮನೆಯಲ್ಲಿ ಇರುವುದಕ್ಕಿಂತ ನನ್ನ ಮನೆಯಲ್ಲಿ ಇರುವುದೇ ಹೆಚ್ಚು ಸಮಯ. ನಾನು ಹೊರಗೆಲ್ಲಾದರೂ ಹೊರಟೆ ಎಂದರೆ `ಸರ್ ಜೊತೆ ನಾನೂ ಬರಬಹುದೇ? ಎಂದು ಕೇಳುತ್ತಾನೆ. `ಬಾ.. ಅಡ್ಡಿ ಇಲ್ಲ ಎಂದರೆ ನನ್ನನ್ನು ಹಿಂಬಾಲಿಸುತ್ತಾನೆ. ನಾನು ಮಾತನ್ನಾಡದೆ ಹೊರಟೆನಾದರೆ `ನಾನು ತಮ್ಮ ಸಂಗಡ ಬರುವುದು ಸರ್‌ಗೆ ಇಷ್ಟ ಇಲ್ಲ ಅಂತ ಕಾಣುತ್ತದೆ ಎಂದು ತನ್ನಷ್ಟಕ್ಕೇ ಹೇಳಿಕೊಂಡು ಹಿಂದೆ ಉಳಿಯುತ್ತಾನೆ.

ತನ್ನ ತಾಯಿಯಂತೆಯೇ ನನ್ನಾಕೆಯ ಕೆಲಸ ಕಾರ್ಯಗಳಲ್ಲಿಯೂ ನೆರವಾಗುತ್ತಾನೆ.`ತರಕಾರಿ ಹೆಚ್ಚಿ ಕೊಡಲೇ ಅತ್ತೇ?,`ಕೊಬ್ಬರಿ ತುರಿದು ಕೊಡಲೇ ಅತ್ತೇ?,`ಮಿಕ್ಸರ್ ಸ್ವಿಚ್ ಆನ್ ಮಾಡಲೇ ಅತ್ತೇ? ಎಂದು ಕೇಳುತ್ತಾನೆ. ಕೇಳದೆ ಯಾವ ಕೆಲಸವನ್ನೂ ಮುಂದಾಗಿ ತಾನು ಮಾಡಲು ಹೋಗುವವನಲ್ಲ ತಿರುಬೋಕಿ.

ಅವನು ಊರಿನಲ್ಲಿ ಇದ್ದ ದಿನಗಳಲ್ಲಿ ನನಗಾಗಲೀ ನನ್ನಾಕೆಗಾಗಲೀ ತರಕಾರಿ ಮಾರುಕಟ್ಟೆಗೆ ಹೋಗುವ ಪ್ರಮೇಯ ಬರುತ್ತಿರಲಿಲ್ಲ. 'ಒಂದು ಚೀಲ ಕೊಡಿ ಅತ್ತೇ.ಯಾವ ಯಾವ ತರಕಾರಿ ತರಬೇಕು?ಯಾವ ಸೊಪ್ಪು ತರಬೇಕು? ಹೇಳಿ. ತರುತ್ತೇನೆ' ಎನ್ನುತ್ತಾನೆ. ಕೊಟ್ಟ ಚೀಲ, ದುಡ್ಡು ತೆಗೆದುಕೊಂಡು ಹೊರಡುತ್ತಾನೆ. ತರಕಾರಿ, ಸೊಪ್ಪು ತುಂಬಿದ ಚೀಲ ಹೊತ್ತು ಮನೆಗೆ ಬರುತ್ತಾನೆ. ಅವೆಲ್ಲವನ್ನೂ ಬೇರೆ ಬೇರೆ ಮಾಡಿ ಇಡುವ ಕೆಲಸವೂ ಅವನದೇ. ಫ್ರಿಜ್‌ನಲ್ಲಿ ಇಡಬೇಕಾದುವನ್ನು ಅದರಲ್ಲಿ ಇಡುತ್ತಾನೆ.